ಹುಬ್ಬಳ್ಳಿನಗರದ ದೇವಸ್ಥಾನಗಳಿಗೆ ಅನುಧಾನ

1985 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಜರಾಯಿ ಇಲಾಖೆಯಿಂದ ಕಳೆದೈದು ವರ್ಷದಿಂದ ಹುಬ್ಬಳ್ಳಿ ನಗರದ ಎಷ್ಟು ದೇವಸ್ಥಾನಗಳಿಗೆ ಅನುದಾನ ಇನ್ನು ಕೊಡಬೇಕಾಗಿರುವ ಅನುದಾನ ಹಣ ಎಷ್ಟು, ಎಷ್ಟು, ಕಾಲಾವಧಿಯಲ್ಲಿ ಬಿಡುಗಡೆ ಮಾಡಲಾಗುವುದು ಅನುದಾನ ಪಡೆದ ಹುಬ್ಬಳ್ಳಿ ನಗರದ ದೇವಾಲಯಗಳ ವಿವರ ಸರ್ಕಾರ ಪೂರೈಸುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಹುಬ್ಬಳ್ಳಿ ನಗರದ 26 ದೇವಸ್ಥಾನಗಳಿಗೆ ಕಳೆದ ಐದು ವರ್ಷಗಳಲ್ಲಿ ರೂ. 6,50,000.00 ಅನುದಾನ ಮಂಜೂರು ಮಾಡಿದೆ ಅದರಲ್ಲಿ ರೂ. 4,55,000.00ಗಳನ್ನು 19 ಸಂಸ್ಥೆಗಳಿಗೆ ಬಿಡುಗಡೆ ಮಾಡಿದೆ ಉಳಿದ ರೂ. 1,95,000.00ಗಳಿಗೆ ಸಂಬಂಧಿಸಿದ 7 ಸಂಸ್ಥೆಗಳವರಿಗೆ ಅಗತ್ಯ ದಾಖಲೆ ಒದಗಿಸಿ ಹಣ ಪಡೆಯುವಂತೆ ಟ್ರಸ್ಟಿಗಳಿಗೆ ತಿಳಿಸಲಾಗಿದೆ. ಅನುದಾನ ಪಡೆದ ಸಂಸ್ಥೆಗಳ ವಿವರ ಅನುಬಂಧದಲ್ಲಿ ನೀಡಿದೆ.

ಅನುಬಂಧ

ಕ್ರಮ ಸಂಖ್ಯೆ	*ಸಂಸ್ಥೆಗಳ ಹೆಸರು ಮತ್ತು ವರ್ಷ*	*ಮಂಜೂರಾದ ಮೊತ್ತ*	*ಸಂಸ್ಥೆಗಳಿಗೆ ಬಿಡುಗಡೆ ಮಾಡಲು ಬಾಕಿ ಉಳಿದ ಮೊತ್ತ*
1990-91			
1.	ಶ್ರೀ ದುರ್ಗಾದೇವಿ ದೇವಸ್ಥಾನ ಹಳೇ ಹುಬ್ಬಳ್ಳಿ	20,000.00	-
2.	ಶ್ರೀ ದುರ್ಗಾದೇವಿ ದೇವಸ್ಥಾನ ಹಳೇ ಹುಬ್ಬಳ್ಳಿ	30,000.00	-
3.	ಶ್ರೀ ಮರಾಠ ಭಾರತಿ ಮಠ ಮರಾಠ ಗಲ್ಲಿ, ಹುಬ್ಬಳ್ಳಿ	50,000.00	-
4.	ಶ್ರೀ ಕಾಳಿಕಾದೇವಿ ದೇವಸ್ಥಾನ ಅಕ್ಕಸಾಲಿಗರ ಓಣಿ, ಹಳೇ ಹುಬ್ಬಳ್ಳಿ	20,000.00	-
5.	ಶ್ರೀ ಬಸವೇಶ್ವರ ದೇವಸ್ಥಾನ ಘಂಟಿಕೇರಿ ಓಣಿ, ಹುಬ್ಬಳ್ಳಿ	25,000.00	-
1991-92			
6.	ಶ್ರೀ ದುರ್ಗಾದೇವಿ ದೇವಸ್ಥಾನ ಹಳೇ ಹುಬ್ಬಳ್ಳಿ	10,000.00	-

7.	ಶ್ರೀ ಮರಾಠ ಭಾರತಿ ಮಠ ಮರಾಠ ಗಲ್ಲಿ, ಹುಬ್ಬಳ್ಳಿ	20,000.00	-
8.	ಶ್ರೀ ವಿಶ್ವೇಶ್ವರನಗರ ಕಲ್ಯಾಣ ಮಂಟಪ, ವಿಶ್ವೇಶ್ವರನಗರ ಹುಬ್ಬಳ್ಳಿ	15,000.00	-
9.	ಶ್ರೀ ಗಣೇಶೋತ್ಸವ ಸಮಿತಿ, ನ್ಯೂ ಕಾಟನ್ ಮಾರ್ಕೆಟ್ ಹುಬ್ಬಳ್ಳಿ	15,000.00	-
10.	ಶ್ರೀ ಗ್ರಾಮದೇವತೆ ದೇವಸ್ಥಾನ ಬೆಂಗೇರಿ ಹುಬ್ಬಳ್ಳಿ	20,000.00	-
1992-93			
11.	ಶ್ರೀ ಗಣೇಶೋತ್ಸವ ಸಮಿತಿ, ನ್ಯೂ ಕಾಟನ್ ಮಾರ್ಕೆಟ್ ಹುಬ್ಬಳ್ಳಿ	20,000.00	-
12.	ಶ್ರೀ ಚೌಡೇಶ್ವರಿ ದೇವಿ ದೇವಸ್ಥಾನ ಹಳೇ ಹುಬ್ಬಳ್ಳಿ	15,000.00	15,000.00
1993-94			
13.	ಶ್ರೀ ಕುಮಾರೇಶ್ವರ ಶಿವಯೋಗಿ ಸಂಘ, ಮೂರುಸಾವಿರ ಮಠ ಹುಬ್ಬಳ್ಳಿ	25,000.00	-
14.	ಶ್ರೀ ಗಣೇಶೋತ್ಸವ ಸಮಿತಿ, ನ್ಯೂ ಕಾಟನ್ ಮಾರ್ಕೆಟ್, ಹುಬ್ಬಳ್ಳಿ	20,000.00	
15.	ಶ್ರೀ ಗ್ರಾಮದೇವತೆ ದೇವಸ್ಥಾನ ಬೆಂಗೇರಿ ಹುಬ್ಬಳ್ಳಿ	10,000.00	-
16.	ಶ್ರೀ ಘಂಟಿಕೇರಿ ಬಸವೇಶ್ವರ ದೇವಸ್ಥಾನ, ಹುಬ್ಬಳ್ಳಿ	25,000.00	-
17.	ಶ್ರೀ ಸಿದ್ದರೂಢಸ್ವಾಮಿ ಮಠ ಹುಬ್ಬಳ್ಳಿ	50,000.00	-
1994-95			
18.	ಶ್ರೀ ವಿಶ್ವೇಶ್ವರನಗರ ಕಲ್ಯಾಣ ಮಂಟಪ, ವಿಶ್ವೇಶ್ವರನಗರ ಹುಬ್ಬಳ್ಳಿ	25,000.00	25,000.00
19.	ಶ್ರೀ ವಿಘ್ನೇಶ್ವರ ದೇವಸ್ಥಾನ	20,000.00	20,000.00
20.	ಶ್ರೀ ಜಡೆಯ ಶಂಕರಲಿಂಗ ದೇವಸ್ಥಾನ, ಹಳೇ ಹುಬ್ಬಳ್ಳಿ	25,000.00	-

21.	ಶ್ರೀ ಗಣೇಶೋತ್ಸವ ಸಮಿತಿ, ನ್ಯೂ ಕಾಟನ್ ಮಾರ್ಕೆಟ್ ಹುಬ್ಬಳ್ಳಿ	50,000.00	50,000.00
22.	ಶ್ರೀ ಗ್ರಾಮದೇವತೆ ದೇವಸ್ಥಾನ ಬೆಂಗೇರಿ ಹುಬ್ಬಳ್ಳಿ	30,000.00	-
23.	ಶ್ರೀ ಜಗನ್ಮಾತಾ ದುರ್ಗಾದೇವಿ ದೇವಸ್ಥಾನ ದೇಸಾಯಿ ಓಣ, ಹುಬ್ಬಳ್ಳಿ	25,000.00	-
24.	ಶ್ರೀ ಮಾರುತಿ ದೇವಸ್ಥಾನ ಹುಬ್ಬಳ್ಳಿ	50,000.00	50,000.00
25.	ಶ್ರೀ ವೀರಭದ್ರೇಶ್ವರ ಕಲ್ಯಾಣ ಮಂಟಪ, ಬಮ್ಮಾಪುರ ಹುಬ್ಬಳ್ಳಿ	10,000.00	10,000.00
26.	ಶ್ರೀ ವೀರಭದ್ರೇಶ್ವರ ಕಲ್ಯಾಣ ಮಂಟಪ ಬಮ್ಮಾಪುರ ಹುಬ್ಬಳ್ಳಿ	25,000.00	25,000.00
		6,50,000.00	**1,95,000.00**

ಹುಬ್ಬಳ್ಳಿ ನಗರದ ಬಸ್ ನಿಲ್ದಾಣ

1986 - ಶ್ರೀ ಆಶೋಕ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಹುಬ್ಬಳ್ಳಿ ಮಹಾನಗರದಲ್ಲಿ ಈಗಿರುವಂತಹ ಸೆಂಟ್ರಲ್ ಬಸ್ ನಿಲ್ದಾಣ ಅತೀ ಚಿಕ್ಕದಾಗಿದ್ದು ಸಾಗೂ ನಗರದ ಮಧ್ಯವರ್ತಿಯಲ್ಲಿ ಇರುವುದರಿಂದ ಜನಸಾಮಾನ್ಯರಿಗೆ ಇದರಿಂದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯ;*

ಆ) *ಆಗಿದ್ದಲ್ಲಿ, ನೂತನ ಬಸ್ಸ ನಿಲ್ದಾಣ ನಿರ್ಮಿಸಲು ಜಮೀನು ಖರೀದಿ ಮಾಡಲಾಗಿದೆಯೇ, ಅದರ ಸ್ಥಳಯಾವುದು, ಅದಕ್ಕಾಗಿರುವ ವಿರ್ಚಿಷ್ಟು, ನೂತನ ನಿಲ್ದಾಣವನ್ನು ಎಷ್ಟು ದಿನಗಳಲ್ಲಿ ಪೂರ್ಣ ಮಾಡಿ ಕಾರ್ಯಗತ ಮಾಡಲಾಗುವುದು ?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಹೌದು.

ಆ) ಗೋಕುಲ ರಸ್ತೆಯಲ್ಲಿ ಸಾರಿಗೆ ಸಂಸ್ಥೆಯ ವಶದಲ್ಲಿರತಕ್ಕ 24 ಎಕರೆ 30 ಗುಂಟೆ ಖಾಲಿ ನಿವೇಶನದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸಲು ನಿರ್ಧರಿಸಲಾಗಿದೆ. ಆದುದರಿಂದ ಜಮೀನು ಖರೀದಿಸುವ ಅವಶ್ಯಕತೆ ಇರುವುದಿಲ್ಲ. ನೂತನ ಬಸ್ ನಿಲ್ದಾಣ ಕಾರ್ಯವನ್ನು ಎರಡು ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.